**ಸಾಕ್ಷಿಯನ್ನು ದಿನಾಂಕಃ 01-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ವಾದಿ ಪರ ವಕೀಲರವರಿಂದಃ**

ಈ ಕೇಸನ್ನು ಪಾರ್ವತಮ್ಮ ಹಾಗೂ ಶಿವಲೀಲಮ್ಮ ಇವರು ವೀರಬಸಯ್ಯ ಹಾಗೂ ಮಂಜವ್ವರ ಮೇಲೆ ದಾಖಲಿಸಿರುವರು. ವೀರಬಸಯ್ಯರವರು ಒಂದು ಹೊಲ ಮತ್ತು ಒಂದು ಮನೆಯನ್ನು ಮಾರಾಟ ಮಾಡಿರುವರು. ಖರೀದಿ ಕರಾರಿಗೆ ಸಹಿ ಮಾಡುವ ಕಾಲಕ್ಕೆ ಹೊಲ ಮತ್ತು ಮನೆಗಳು 1 ನೇ ಪ್ರತಿವಾದಿಯ ತಂದೆಯಾದ ಚಂದ್ರಶೇಖರಯ್ಯ ಇವರ ಹೆಸರಿನಲ್ಲಿ ಇದ್ದವು. ಅವರಿಗೆ ವೀರಬಸಯ್ಯ, ಮಂಜಮ್ಮ, ಭಾಗ್ಯಮ್ಮ, ಮೈತ್ರಮ್ಮ ಎಂಬ ಮಕ್ಕಳು ಇದ್ದರು. ವಾದಿಗಳು 1 ನೇ ಪ್ರತಿವಾದಿಯ ಹೆಂಡತಿ ಹಾಗೂ ಮಗಳು ಎಂದರೆ ನನಗೆ ಗೊತ್ತಿಲ್ಲ. ಚಂದ್ರಶೇಖರಯ್ಯನ ಹೆಂಡತಿಯ ಹೆಸರು ನನಗೆ ನೆನಪಿಲ್ಲ. ಚಂದ್ರಶೇಖರಯ್ಯನ ಹೆಂಡತಿ ಹಾಗೂ ಅವರ ಮೂರು ಜನ ಹೆಣ್ಣು ಮಕ್ಕಳು ಯಾವುದೇ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-9 ಕ್ರಯ ಕರಾರಿಗೆ 1 ನೇ ಪ್ರತಿವಾದಿ ಹಾಗೂ ಆತನ ತಾಯಿ ಸಹಿ ಮಾಡಿರುವರು. ಆ ಕಾಲಕ್ಕೆ ವೀರಬಸಯ್ಯನ ತಂಗಿಯಂದಿರು ಇದ್ದರು. ನಿಡಿ-9 ರ ನಂತರ ಆದ ವ್ಯವಹಾರಗಳ ಕುರಿತು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಡಿ-9 ರ ಆಧಾರದ ಮೇಲೆ ಖರೀದಿ ಪತ್ರ ಆಗುವ ಕಾಲಕ್ಕೆ ನಾನು ಹಾಜರಿದ್ದೆನು. 1996 ನೇ ಸಾಲಿನಲ್ಲಿ ನಾವು ಹರಪನಹಳ್ಳಿ ನೊಂದಣಿ ಕಛೇರಿಯಲ್ಲಿ ಖರೀದಿ ಪತ್ರವನ್ನು ನೊಂದಣಿ ಮಾಡಿಸಿರುತ್ತೇವೆ. ಸದರಿ ಖರೀದಿ ಪತ್ರವನ್ನು ಎಷ್ಟು ಮುಖ ಬೆಲೆಯ ಛಾಪಾ ಕಾಗದದಲ್ಲಿ ಬರೆಯಲಾಗಿದೆ ಎಂದು ನಾನು ನೋಡಿರುವುದಿಲ್ಲ. 1996 ರ ನಂತರ ದಾವಾ ಆಸ್ತಿಯು ಯಾರ ಸ್ವಾಧೀನದಲ್ಲಿರುವುದು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಅಕ್ಕ ಪಕ್ಕ ನನ್ನ ಆಸ್ತಿ ಇರುವುದಿಲ್ಲ.

ಖರೀದಿ ಕರಾರಿನಲ್ಲಿ ಎಷ್ಟು ಆಸ್ತಿಗಳಿದ್ದವು ಮತ್ತು ಈ ದಾವೆಯಲ್ಲಿ ಎಷ್ಟು ಆಸ್ತಿಗಳಿವೆ ಎಂದು ನನಗೆ ಗೊತ್ತಿಲ್ಲ. ದಾವಾ ಮನೆಯಲ್ಲಿ ವೀರಬಸಯ್ಯನ ಹೆಂಡತಿ ಮಕ್ಕಳು ವಾಸವಿದ್ದು ದಾವಾ ಹೊಲವನ್ನು ಅವರೇ ಸಾಗುವಳಿ ಮಾಡುತ್ತಿರುವರು ಎಂದರೆ ಸರಿಯಲ್ಲ. ನಾನು ಹಾಗೂ ಬಸವರಾಜಪ್ಪ ಕುಲಸ್ಥರು ಎಂದರೆ ಸರಿ. ಅವರು ನನ್ನ ವಿಶ್ವಾಸಿಕರು ಎಂದರೆ ನಾವು ಮಾತನಾಡುತ್ತೇವೆ. ಅವರ ಮುಲಾಜಿಗೆ ಒಳಗಾಗಿ ಅವರು ದಾವಾ ಆಸ್ತಿಯ ಸ್ವಾಧೀನದಲ್ಲಿಲ್ಲದಿದ್ದರು ಸಹಿತ ನಾನು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜಪ್ಪನಿಗೆ ಅನುಕೂಲವಾಗಲಿ ಎಂದು ನಿಡಿ-9 ನ್ನು ಸುಳ್ಳಾಗಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನನಗೆ ದಾವೆ ಕುರಿತು ಯಾವುದೇ ಮಾಹಿತಿ

ಇಲ್ಲದಿದ್ದರು ಬಸವರಾಜಪ್ಪನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

01.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**